# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 618 |
| 2 | ಪ್ರಶ್ನೆ ಕೇಳಿರುವವರು | ಶ್ರೀ ಎಸ್.ಎಲ್. .ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ: | 23.12.2022 |
| 4 | ಉತ್ತರಿಸಬೇಕಾದವರು | ಕೃಷಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರ ಕೃಷಿ ಇಲಾಖೆಯಿಂದ ನೀಡುತ್ತಿರುವ ವಿವಿಧ ಬಗೆಯ ಬಿತ್ತನೆ ಬೀಜಗಳು ಹಾಗೂ ವಿವಿಧ ಸಲಕರಣೆಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರ ಕೃಷಿ ಇಲಾಖೆಯಿಂದ ನೀಡುತ್ತಿರುವ ವಿವಿಧ ಬಗೆಯ ಸಲಕರಣೆಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಆದರೆ, ಇಲಾಖೆಯ ಮೂಲಕ ವಿತರಿಸಲು ಉದ್ದೇಶಿಸಲಾದ ವಿವಿಧ ಬಗೆಯ ಬಿತ್ತನೆ ಬೀಜಗಳು ಕಡಿಮೆ ಗುಣಮಟ್ಟದಿಂದ ಕೂಡಿರುವುದು ಕೆಲ ಸಂದರ್ಭಗಳಲ್ಲಿ ವಿಶ್ಲೇಷಿಸಿದಾಗ ಕಂಡು ಬಂದಿದೆ. |
| ಆ) | ಈ ಬಿತ್ತನೆ ಬೀಜಗಳ ಗುಣಮಟ್ಟ ಕಡಿಮೆ ಇರುವುದರಿಂದ ರೈತರಿಗೆ ಉತ್ತಮ ಬೆಳೆ ಬರುತ್ತಿಲ್ಲವಾದ್ದರಿಂದ, ಈ ಬೀಜಗಳನ್ನು ಸರಬರಾಜು ಮಾಡುವ ಕಂಪನಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; | ಸರ್ಕಾರ ಕೃಷಿ ಇಲಾಖೆಯಿಂದ ನೀಡುತ್ತಿರುವ ವಿವಿಧ ಬಗೆಯ ಬಿತ್ತನೆ ಬೀಜಗಳನ್ನು ಇಲಾಖಾ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನೀಕರಿಸುವ ಮುನ್ನ ಸಂಬಂಧಪಟ್ಟ ಸಂಸ್ಥೆಗಳು ಬೀಜಗಳ ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಂಡು, ದೃಢೀಕೃತ ಬೀಜಗಳನ್ನು ಮಾತ್ರ ದಾಸ್ತಾನೀಕರಿಸಲಾಗುತ್ತದೆ. ಅಲ್ಲದೆ, ಹಂಗಾಮು ಪೂರ್ವದಲ್ಲಿ ಬೀಜ ವಿತರಣೆಗೂ ಮುನ್ನ ಇಲಾಖೆಯಲ್ಲಿ ದಾಸ್ತಾನೀಕರಿಸಿದ ಬಿತ್ತನೆ ಬೀಜಗಳಲ್ಲಿ ಬೀಜ ಪರಿವೀಕ್ಷಕರು ಬೀಜ ಮಾದರಿಗಳನ್ನು ತೆಗೆದು, ವಿಶ್ಲೇಷಣೆಗೊಳಪಡಿಸಿ, ಬೀಜಗಳ ಗುಣಮಟ್ಟವನ್ನು ಖಾತರಿಪಡಿಸಿಕೊಂಡ ನಂತರ ರೈತರಿಗೆ ವಿತರಿಸಲಾಗುತ್ತದೆ. ಒಂದು ವೇಳೆ, ಬೀಜಗಳು ಕಡಿಮೆ ಗುಣಮಟ್ಟದಿಂದ ಕಂಡುಬಂದಲ್ಲಿ ಅಂತಹ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗುವುದಿಲ್ಲ, ಹಾಗೂ ಅಂತಹ ಸಂಸ್ಥೆಗಳ ವಿರುದ್ಧ ಬೀಜ ಕಾಯ್ದೆಗಳನ್ವಯ ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| | | ರೈತರಿಗೆ ಗುಣಮಟ್ಟದ ಬೀಜ ವಿತರಿಸಲು ರಾಜ್ಯದಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಅಧಿನಿಯಮ-1966, ಬೀಜ ನಿಯಮಾವಳಿ- 1968 ಮತ್ತು ಬೀಜ ನಿಯಂತ್ರಣ ಆದೇಶ-1983 ಜಾರಿಯಲ್ಲಿದ್ದು, ಸದರಿ ಕಾಯಿದೆಗಳನ್ವಯ ಬೀಜ ಪರಿವೀಕ್ಷಕರುಗಳು ಅಧಿಸೂಚಿತವಾಗಿದ್ದು, ಬೀಜ ವಿತರಣೆ ವ್ಯವಸ್ಥೆಯಲ್ಲಿ ನಿಯಮಿತವಾಗಿ ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ಸಂಗ್ರಹಿಸಿ ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೊಳಪಡಿಸಲಾಗುತ್ತಿದೆ. ಬೀಜ ಮಾದರಿಯು ಕಡಿಮೆಗುಣಮಟ್ಟದ್ದೆಂದು ತಿಳಿದುಬಂದಲ್ಲಿ ಅಂತಹ ಮಾರಾಟಗಾರರು ಮತ್ತು ಬೀಜೋತ್ಪಾದಕರ ಮೇಲೆ ಸದರಿ ಕಾಯಿದೆಗಳನ್ವಯ ಕ್ರಮ ಜರುಗಿಸಲಾಗುತ್ತಿದೆ. ಮುಂದುವರೆದು, ಪರವಾನಗಿ ಇಲ್ಲದೆ ರೈತರಿಗೆ ಕಳಪೆ ಗುಣಮಟ್ಟದ ಬೀಜ ವಿತರಿಸುವ ಮಾರಾಟಗಾರರ ವಿರುದ್ಧ ಸದರಿ ಕಾಯಿದೆಗಳಡಿ ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಕಳಪೆ ಬೀಜ ಹಾವಳಿಯನ್ನು ತಡೆಗಟ್ಟಲು ವಿಜಿಲೆನ್ಸ್ ತಂಡ ಸಹ ರಾಜ್ಯ ಹಾಗೂ ವಿಭಾಗೀಯ ಮಟ್ಟದಲ್ಲಿ ಅಸ್ತಿತ್ವದಲ್ಲಿದೆ.<br><br>ಪ್ರಸ್ತುತ ಸಾಲಿನಲ್ಲಿ ಇಲಾಖೆಯಿಂದ ಒಟ್ಟಾರೆ 7.52 ಲಕ್ಷ ಕ್ವಿಂಟಾಲ್ (ಮುಂಗಾರು-4.06ಲಕ್ಷ ಕ್ವಿಂಟಾಲ್ ಮತ್ತು ಹಿಂಗಾರು/ಬೇಸಿಗೆ–3.46ಲಕ್ಷ ಕ್ವಿಂಟಾಲ್) ಬಿತ್ತನೆ ಬೀಜಗಳನ್ನು ಇಲಾಖೆಯ ರಿಯಾಯಿತಿ ಯೋಜನೆಗಳಡಿ ವಿತರಿಸಲಾಗಿರುತ್ತದೆ. ರೈತರು ಇಲಾಖಾ ರೈತ ಸಂಪರ್ಕಕೇಂದ್ರಗಳು ಹಾಗೂ ಅಧಿಕೃತ ಖಾಸಗಿ ಮಾರಾಟ ಮಳಿಗೆಗಳಿಂದಲೂ ಸಹ ಬಿತ್ತನೆ ಬೀಜಗಳನ್ನು ಖರೀದಿಸುತ್ತಾರೆ. ಇಲಾಖೆಯಿಂದ ಅಧಿಸೂಚಿತಗೊಂಡ ಬೀಜ ಪರಿವೀಕ್ಷಕರು ಇಲಾಖಾ ರೈತ ಸಂಪರ್ಕಕೇಂದ್ರಗಳಿಂದ ಹಾಗೂ ಅಧಿಕೃತ ಖಾಸಗಿ ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ತೆಗೆದು , ಸದರಿ ಬೀಜಗಳನ್ನು ರಾಜ್ಯದ 4 ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ( ಗಂಗಾವತಿ, ಬೆಂಗಳೂರು, ಧಾರವಾಡ ಮತ್ತು ದಾವಣಗೆರೆ) ವಿಶ್ಲೇಷಣೆಗೆ ಒಳಪಡಿಸುತ್ತಾರೆ. 2022-23ನೇ ಸಾಲಿನಲ್ಲಿ ಒಟ್ಟಾರೆ 9614 ಬೀಜ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿರುತ್ತದೆ. ಇದರಲ್ಲಿ 227 ಮಾದರಿಗಳು ಕಡಿಮೆ ಗುಣಮಟ್ಟದ್ದಾಗಿದ್ದು, ಈವರೆಗೆ 154 |

| | | |
|---|---|---|
| | | ಮಾದರಿಗಳಿಗೆ ಸಂಬಂಧಪಟ್ಟಂತೆ ಬೀಜ ಅಧಿನಿಯಮದಡಿ ಮೊಕದ್ದಮೆ ದಾಖಲಿಸಲಾಗಿದೆ. ಉಳಿದ 73 ಮಾದರಿಗಳ ಕುರಿತು ಮೊಕದ್ದಮೆ ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಲಾಗಿದೆ.<br><br>ಪ್ರಸಕ್ತ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿಜಿಲೆನ್ಸ್ ತಂಡಗಳು ಮಾರಾಟ ಮಳಿಗೆಗಳ ತಪಾಸಣೆ ಕೈಗೊಂಡು ಅನಧಿಕೃತವಾಗಿ ದಾಸ್ತಾನು ಮಾಡಿದ 19 ಪ್ರಕರಣಗಳನ್ನು ಪತ್ತೆಹಚ್ಚಿ ಜಪ್ತಿ ಮಾಡಲಾಗಿದೆ. 13 ಪ್ರಕರಣಗಳಲ್ಲಿ ಪರವಾನಗಿಗಳನ್ನು ಅಮಾನತು ಮಾಡಲಾಗಿದೆ. 2 ಪ್ರಕರಣಗಳಲ್ಲಿ ಪರವಾನಗಿಗಳನ್ನು ರದ್ದು ಮಾಡಲಾಗಿದೆ. ಬಾಕಿ ಉಳಿದ 4 ಪ್ರಕರಣಗಳಿಗೆ ನ್ಯಾಯಲಾಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಸದರಿ ಪ್ರಕರಣಗಳಲ್ಲಿ ಒಟ್ಟಾರೆ 434 ಕ್ವಿಂಟಾಲ್ 62.67 ಲಕ್ಷ ಮೌಲ್ಯದ ಬಿತ್ತನೆ ಬೀಜಗಳನ್ನು ಜಪ್ತಿಮಾಡಲಾಗಿದ್ದು, ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.<br><br>The government has not noticed the supply of poor quality equipments by the Department of Agriculture.<br>However on verification of seed samples it has come to the notices of the government.<br>Before stocking the different types of seeds supplied by the Agriculture Department at the Raitha Samparka Kendras, the concerned companies ensure the quality of the seeds and only the quality seeds are stocked. However, before commencement of th season, seed inspectors draw the seed samples, send them for analysis and ensure the quality of the seeds before distributing to the farmers.<br>In case, if the seeds are found substandard, such seeds will not be distributed to the farmers and action will be taken against such companies as per Seed Act.<br>To ensure the supply of good quality seeds to farmers, the State Government is enforcing the Central |

Seed Laws viz., Seed Act 1966, Seed Rules 1968 and Seed Control Order 1983. On regular basis notified Seed Inspectors will randomly draw the samples from the seed dealers and send them for analysis to confirm its quality parameters. Wherever substandard seeds are noticed, action has been taken as per the provisions of the Seed laws. Further, action has been taken against seed dealers distributing seeds to farmers without valid Seed license by seed inspectors and agriculture specialists. Government of Karnataka has constituted separate vigilance squad at State and division level to curb sale of spurious seeds.

During present season, 7.52 lakh quintals (Kharif-4.06 lakh quintals and Rabi/Summer-3.46 lakh quintals) of seeds have been distributed to farmers under Department subsidy schemes. Farmers purchase seeds from both Department's Raitha samparka kendras and also from authorized private dealer shops. Seed inspectors notified from the Department will draw seed samples both from Department's Raitha Samparka Kendras and also from authorized private dealers shops and these seeds will be analyzed in the 4 different seed testing laboratories (Gangavathi, Bangalore, Dharwad, Davanagere) of the state. During 2022-23 totally 9614 seed samples have been analyzed and out of which 227 samples are found substandard. With respect to these substandard seeds 154 cases have been booked as per Seed Act. With respect to remaining 73 samples case filing is under progress. Details are provided in Annexure-I and II.

In the current year, vigilance teams have conducted inspection of seed outlets in various districts of the state and 19 cases of unauthorized stocking have been detected and confiscated. Licenses were

| | | |
|---|---|---|
| | | suspended in 13 cases. Licenses were canceled in 2 cases. Cases have been filed in court for the remaining 4 cases. Around 434 quintals of sowing seeds worth 62.67 lakhs were seized in the said cases, the details of which are provided in Annexure-3. |
| ಇ) | ರೈತರಿಗೆ ನೀಡುವ ಬಿತ್ತನೆ ಬೀಜಗಳ ಗುಣಮಟ್ಟ ಕಡಿಮೆಯಾಗಿರುವುದರಿಂದ ಬೆಳೆದ ಬೆಳೆಗಳು ಉತ್ತಮವಾಗಿ ಬರುತ್ತಿಲ್ಲವಾದ್ದರಿಂದ ಇವರಿಗೆ ಸರ್ಕಾರದಿಂದ ನೀಡಲಾದ ಪರಿಹಾರದ ಮೊತ್ತ ಎಷ್ಟು?(ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) | ಪ್ರಸಕ್ತ ಸಾಲಿನಲ್ಲಿ ರೈತರಿಗೆ ನೀಡುವ ಬಿತ್ತನೆ ಬೀಜಗಳ ಗುಣಮಟ್ಟ ಕಡಿಮೆಯಾಗಿರುವುದರಿಂದ ಬೆಳೆ ನಷ್ಟವಾದ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ. ಆದರೆ ಕಡಿಮೆ ಗುಣಮಟ್ಟದ ಬಿತ್ತನೆ ಬೀಜಗಳ ಪೂರೈಕೆಯಿಂದ ರೈತರಿಗೆ ಬೆಳೆ ನಷ್ಟವಾದಲ್ಲಿ ರೈತರು ಗ್ರಾಹಕರ ವೇದಿಕೆಯಲ್ಲಿ ದೂರು ದಾಖಲಿಸಿ, ಬೀಜಗಳ ಗುಣಮಟ್ಟದಿಂದ ಬೆಳೆ ನಷ್ಟವಾಗಿರುವುದು ದೃಢಪಟ್ಟಲ್ಲಿ ನಿಯಮಾನುಸಾರ ಪರಿಹಾರ ಪಡೆದುಕೊಳ್ಳಬಹುದಾಗಿರುತ್ತದೆ.<br><br>In the current year, cases of crop loss due to supply of substandard seeds have not been reported to the Government.<br>In case of crop loss due to supply of substandard seeds, the farmers can file a complaint in the Consumer Forum and if it is confirmed that the crop loss is due to poor quality of seeds, they can get compensation as per rules. |

ಸಂಖ್ಯೆ : AGRI –ACT/266/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1 LCQ-63(618)

2022-23 ನೇ ಸಾಲಿನಲ್ಲಿ ರಾಜ್ಯದಲ್ಲಿ ಕಡಿಮೆ ಗುಣಮಟ್ಟದ ಬೀಜ ಮಾದರಿಗಳ ಕುರಿತು ತೆಗೆದುಕೊಳ್ಳಲಾದ ಕ್ರಮಗಳ ವಿವರ

| ಕ್ರ.ಸಂ | ಜಿಲ್ಲೆ | ಕಡಿಮೆ ಗುಣಮಟ್ಟದ ಮಾದರಿಗಳ ಸಂಖ್ಯೆ | ದಾಖಲಾಗಿರುವ ಮೊಕದ್ದಮೆಗಳ ಸಂಖ್ಯೆ | ಮೊಕದ್ದಮೆ ದಾಖಲಾತಿ ಪ್ರಗತಿಯಲ್ಲಿರುವ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 6 | 2 | 4 |
| 2 | ಬಳ್ಳಾರಿ | 13 | 11 | 2 |
| 3 | ಬೆಂಗಳೂರು | 0 | 0 | 0 |
| 4 | ಬೆಳಗಾವಿ | 6 | 5 | 1 |
| 5 | ಬೀದರ್ | 30 | 26 | 4 |
| 6 | ಚಾಮರಾಜನಗರ | 1 | 0 | 1 |
| 7 | ಚಿಕ್ಕಬಳ್ಳಾಪುರ | 2 | 1 | 1 |
| 8 | ಚಿಕ್ಕಮಗಳೂರು | 3 | 3 | 0 |
| 9 | ಚಿತ್ರದುರ್ಗ | 7 | 6 | 1 |
| 10 | ದಕ್ಷಿಣಕನ್ನಡ | 0 | 0 | 0 |
| 11 | ದಾವಣಗೆರೆ | 8 | 7 | 1 |
| 12 | ಧಾರವಾಡ | 3 | 3 | 0 |
| 13 | ಗದಗ್ | 0 | 0 | 0 |
| 14 | ಕಲಬುರ್ಗಿ | 14 | 14 | 0 |
| 15 | ಹಾಸನ | 16 | 15 | 1 |
| 16 | ಹಾವೇರಿ | 5 | 4 | 1 |
| 17 | ಕೊಡಗು | 1 | 1 | 0 |
| 18 | ಕೋಲಾರ | 1 | 0 | 1 |
| 19 | ಕೊಪ್ಪಳ | 19 | 6 | 13 |
| 20 | ಮಂಡ್ಯ | 1 | 0 | 1 |
| 21 | ಮೈಸೂರು | 39 | 23 | 16 |
| 22 | ರಾಯಚೂರು | 10 | 5 | 5 |
| 23 | ರಾಮನಗರ | 2 | 0 | 2 |
| 24 | ಶಿವಮೊಗ್ಗ | 15 | 15 | 0 |
| 25 | ತುಮಕೂರು | 3 | 2 | 1 |
| 26 | ಉಡುಪಿ | 0 | 0 | 0 |
| 27 | ಉತ್ತರಕನ್ನಡ | 6 | 0 | 6 |
| 28 | ವಿಜಯಪುರ | 4 | 3 | 1 |
| 29 | ವಿಜಯನಗರ | 5 | 2 | 3 |
| 30 | ಯಾದಗಿರಿ | 7 | 0 | 7 |
| | ಒಟ್ಟು | 227 | 154 | 73 |

ಅನುಬಂಧ-2 LCQ-63(618)

## 2022-23 ನೇ ಸಾಲಿನಲ್ಲಿ ರಾಜ್ಯದಲ್ಲಿ ಕಡಿಮೆ ಗುಣಮಟ್ಟದ ಬೀಜ ಮಾದರಿಗಳ ಜಿಲ್ಲಾವಾರು/ಬೆಳೆವಾರು ವಿವರ

| ಕ್ರ.ಸಂ. | ಜಿಲ್ಲೆ/ಬೆಳೆ | ಭತ್ತ | ಸಜ್ಜೆ | ಜೋಳ | ರಾಗಿ | ಮೆಕ್ಕೆ ಜೋಳ | ಗೋಧಿ | ತೊಗರಿ | ನವಣೆ | ಹೆಸರು | ಉದ್ದು | ಅಲಸಂದೆ | ಕಡಲೆ | ನೆಲಗಡಲೆ | ಸೂರ್ಯಕಾಂತಿ | ಕುಸುಬೆ | ಸೋಯಾ ಅವರೆ | ಹತ್ತಿ | ಒಟ್ಟು ಮಾದರಿಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|
| 1 | ಬಾಗಲಕೋಟ | | | | | 4 | | | | | | | | | 2 | | | | |
| 2 | ಬಳ್ಳಾರಿ | 1 | 2 | | | 6 | | 2 | 1 | | | | | | | | | | 6 |
| 3 | ಬೆಂಗಳೂರು | | | | | | | | | | | | | | | | | 1 | 13 |
| 4 | ಬೆಳಗಾವಿ | | | | | | | | | | | | | | | | | | 0 |
| 5 | ಬೀದರ್ | | | | | 1 | | | | | | | | | | | 6 | | 6 |
| 6 | ಚಾಮರಾಜನಗರ | 1 | | | | | | | | 7 | 6 | | 2 | | | 3 | 11 | | 30 |
| 7 | ಚಿಕ್ಕಬಳ್ಳಾಪುರ | | | | | 1 | | 1 | | | | | | | | | | | 1 |
| 8 | ಚಿಕ್ಕಮಗಳೂರು | | | | | 3 | | | | | | | | | | | | | 2 |
| 9 | ಚಿತ್ರದುರ್ಗ | | | | | 7 | | | | | | | | | | | | | 3 |
| 10 | ದಕ್ಷಿಣಕನ್ನಡ | | | | | | | | | | | | | | | | | | 7 |
| 11 | ದಾವಣಗೆರೆ | | | | | 8 | | | | | | | | | | | | | 0 |
| 12 | ಧಾರವಾಡ | | | | | | | 2 | | | | | | | | | | | 8 |
| 13 | ಗದಗ್ | | | | | | | | | | | | | | | | 1 | | 3 |
| 14 | ಕಲಬುರ್ಗಿ | | | | | | | 1 | | | | | | | | | | | 0 |
| 15 | ಹಾಸನ | 16 | | | | | | | | | | | | | | | 12 | 1 | 14 |
| | | | | | | | | | | | | | | | | | | | 16 |

| ಕ್ರ.ಸಂ. | ಜಿಲ್ಲೆ/ಬೆಳೆ | ಭತ್ತ | ಸಜ್ಜೆ | ಜೋಳ | ರಾಗಿ | ಮೆಕ್ಕೆ ಜೋಳ | ಗೋಧಿ | ತೊಗರಿ | ನವಣೆ | ಹೆಸರು | ಉದ್ದು | ಅಲಸಂದೆ | ಕಡಲೆ | ನೆಲಗಡಲೆ | ಸೂರ್ಯಕಾಂತಿ | ಕುಸುಬೆ | ಸೋಯಾ ಅವರೆ | ಹತ್ತಿ | ಒಟ್ಟು ಮಾದರಿಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|
| 16 | ಹಾವೇರಿ | | | | | 3 | | | | | | | | | | | 2 | | 5 |
| 17 | ಕೊಡಗು | 1 | | | | | | | | | | | | | | | | | 1 |
| 18 | ಕೋಲಾರ | | | | | | | 1 | | | | | | | | | | | 1 |
| 19 | ಕೊಪ್ಪಳ | | 1 | | | 15 | | | | | | | | | 3 | | | | 19 |
| 20 | ಮಂಡ್ಯ | 1 | | | | | | | | | | | | | | | | | 1 |
| 21 | ಮೈಸೂರು | 39 | | | | | | | | | | | | | | | | | 39 |
| 22 | ರಾಯಚೂರು | | 2 | | | | | 4 | | | | | 2 | | 2 | | | | 10 |
| 23 | ರಾಮನಗರ | 2 | | | | | | | | | | | | | | | | | 2 |
| 24 | ಶಿವಮೊಗ್ಗ | 6 | | | | 9 | | | | | | | | | | | | | 15 |
| 25 | ತುಮಕೂರು | 2 | | | 1 | | | | | | | | | | | | | | 3 |
| 26 | ಉಡುಪಿ | | | | | | | | | | | | | | | | | | 0 |
| 27 | ಉತ್ತರಕನ್ನಡ | 6 | | | | | | | | | | | | | | | | | 6 |
| 28 | ವಿಜಯಪುರ | | 2 | | | 2 | | | | | | | | | | | | | 4 |
| 29 | ವಿಜಯನಗರ | | | | | 4 | | 1 | | | | | | | | | | | 5 |
| 30 | ಯಾದಗಿರಿ | 1 | | | | | | 1 | | | | | | 4 | | | | 1 | 7 |
| | ಒಟ್ಟು | 76 | 7 | 0 | 1 | 63 | 0 | 13 | 1 | 7 | 6 | 0 | 4 | 4 | 7 | 3 | 32 | 3 | 227 |

ಅನುಬಂಧ-3 LCQ-63(618)

## 2022-23ನೇ ಸಾಲಿನಲ್ಲಿ ಜಾಗೃತ ಕೋಶದಿಂದ ದಾಳಿ ಮಾಡಿ ಜಪ್ತಿ ಮಾಡಿರುವ ಬಿತ್ತನೆ ಬೀಜಗಳ ವಿವರ

| ಕ್ರ.ಸಂ | ವಿಭಾಗ | ದಾಸ್ತಾನು ಮಟ್ಟುಗೋಲು ಹಾಕಿಕೊಂಡಿರುವ ಪ್ರಕರಣಗಳ ಸಂಖ್ಯೆ | ದಾಸ್ತಾನು ಮುಟ್ಟುಗೋಲು ಹಾಕಿಕೊಂಡಿರುವ ಬಿತ್ತನೆ ಬೀಜಗಳ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ದಾಸ್ತಾನು ಮುಟ್ಟುಗೋಲು ಹಾಕಿಕೊಂಡಿರುವ ಬಿತ್ತನೆ ಬೀಜಗಳ ಒಟ್ಟು ಮೊತ್ತ (ಲಕ್ಷ ರೂಗಳಲ್ಲಿ) |
|---|---|---|---|---|
| 1 | ಬೆಂಗಳೂರು | 7 | 41 | 13.85 |
| 2 | ಮೈಸೂರು | 0 | 0 | 0.00 |
| 3 | ಬೆಳಗಾವಿ | 7 | 254 | 40.80 |
| 4 | ಕಲಬುರಗಿ | 5 | 139 | 8.02 |
| ಒಟ್ಟು | | 19 | 434 | 62.67 |

## ಅನುಬಂಧ - 3

2015-16ನೇ ಸ ಲಿನಲ್ಲಿ ಒಡಂಬಡಿಕೆ ಅವಧಿ ಮುಕ್ತಾಯಗೊಂಡ ಸಂಸ್ಥೆಗಳ ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳ ವಿವರಗಳು ಈ ಕೆಳಕಂಡಂತಿರುತ್ತದೆ:

| ಕ್ರ. ಸಂ. | ಸೇವಾದಾರ ಸಂಸ್ಥೆಗಳು | ಕೃಷಿ ಯಂತ್ರಧಾರೆ ಕೇಂದ್ರಗಳ ಸಂಖ್ಯೆ |
|---|---|---|
| 1 | ಮೆ ವಿ. ಎಸ್. ಟಿ. ಟಿಲ್ಲರ್ಸ್ ಟ್ರ್ಯಾಕ್ಟರ್ಸ್ ಲಿ., ಬೆಂಗಳೂರು, | 79 |
| 2 | ಮೆ ಮಹಿಂದ್ರ & ಮಹಿಂದ್ರ ಲಿ(ಸ್ವರಾಜ್), ಪಂಜಾಬ್ | 21 |
| 3 | ಮೆ ಮಹಿಂದ್ರ & ಮಹಿಂದ್ರ ಲಿ.,ಮುಂಬೈ | 33 |
| 4 | ಮೆ ಜಾನ್ ಡೀರ್ ಇಂಡಿಯಾ ಪ್ರೈ.ಲಿ., ಪೂನಾ | 34 |
| | ಒಟ್ಟು | 167 |

## Annexure – 3

The S rvice Provider wise details of krishi yantra dhare centres for which agreement period is expired is given below:

| Sl. No. | Name of the Service Provider | No. of CHS Centres |
|---|---|---|
| 1. | M/s. VST Tillers Tractors Ltd, Bangalore | 79 |
| 2. | M/s. Mahindra & Mahindra Ltd(Swaraj), Punjab | 21 |
| 3. | M/s. Mahindra & Mahindra Ltd, Mumbai | 33 |
| 4. | M/s. John Deere India Pvt Ltd., Pune | 34 |
| | Total | 167 |